೭೩೭೬ ಅಪ ದಿನಾಂಕ 28.03.2022 

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್. ರುದ್ರೇಗೌಡಇವರ ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಹೇಳಿಕೆ

### ಸೂಚನೆ

"ಸರ್ಕಾರವು ಇತ್ತೀಚಿಗೆ ಕರ್ನಾಟಕ ಲೋಕಸೇವಾ ಆಯೋಗ ಇಂದ ನಡೆಯುವ ವ್ಯಕ್ತಿತ್ವ ಪರೀಕ್ಷೆಗೆ ನಿಗದಿಪಡಿಸಿರುವ ಅಂಕಗಳನ್ನು ಏಕಾಏಕಿ ಕಡಿತಗೊಳಿಸಿರುತ್ತದೆ. ಇದರಿಂದ ವ್ಯಕ್ತಿತ್ವ ಪರೀಕ್ಷೆ ಮಹತ್ವ ಹೀನವಾಗಿದೆ. ಅಭ್ಯರ್ಥಿಗಳು ಗುಣಮಟ್ಟ ಸೇವೆಗಳಿಗೆ ಮತ್ತು ಸಿವಿಲ್ ಸೇವೆಗಳಿಗೆ ಸೂಕ್ತರೇ ಎಂಬ ಬಗ್ಗೆ, ಅಂದರೆ ನಾಯಕತ್ವದ ಗುಣ, ತೀರ್ಮಾನ ತೆಗೆದುಕೊಳ್ಳಬಹುವ ವಿವಿಧ ಮತ್ತು ಆಳವಾದ ಆಸಕ್ತಿ ಸಾಮರ್ಥ ಮತ್ತು ಪ್ರೇರಣಾ ಕೌಶಲ್ಯ ಹಾಗೂ ತಾರ್ತಿಕ ಯೋಚನಾ ಸಾಮರ್ಥಗಳ ಬಗ್ಗೆ ನಿರ್ಧರಿಸುವ ಅವಶ್ಯಕತೆ ಇದೆ".

"ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) (ತಿದ್ದುಪಡಿ) ನಿಯಮಗಳು, 2019 ರಂತೆ ಆಯೋಗವು ಗ್ರೂಪ್- ಎ ಮತ್ತು ಗ್ರೂಪ್-ಬಿ ಸೇವೆಗಳ ಸಂಖ್ಯೆಗೆ ಅನುಗುಣವಾಗಿ 1:3 ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯಲಾಗುವುದು. ಆಯೋಗವು ಮುಖ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಒಟ್ಟು ಅಂಕಗಳ ಜೇಷ್ಠತೆ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿಯನ್ವಯ ಲಭ್ಯವಿರುವ ಹುದ್ದೆಗಳಲ್ಲಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯಲಾಗುವುದು. ಲೋಕಸೇವಾ ಆಯೋಗದ ಪರೀಕ್ಷ ನಿಯಮದಂತೆ ವ್ಯಕ್ತಿತ್ವ ಪರೀಕ್ಷೆಯು 200 ಅಂಕಗಳನ್ನು ಒಳಗೊಂಡಿರುತ್ತದೆ. ಆದರೆ ವ್ಯಕ್ತಿತ್ವ ಪರೀಕ್ಷೆಯ ಗರಿಷ್ಠ ಅಂಕವನ್ನು ಕ್ರಮೇಣವಾಗಿ 50 ಅಂಕಗಳಿಗೆ ಇಳಿಸಿ ಮತ್ತೆ ಏಕಾಏಕಿ 25 ಅಂಕಗಳಿಗೆ ಇಳಿಸಿರುವುದು ಅಸಮಂಜಸ. ವ್ಯಕ್ತಿತ್ವ ಪರೀಕ್ಷೆಯಲ್ಲಿ ಅಭ್ಯರ್ಥಿಗಳ ವೈಯಕ್ತಿಕ ಕೌಶಲ್ಯ, ಚಿಂತನ ಸಾಮರ್ಥ, ವಿವೇಚನಾ ಶಕ್ತಿ ಇತ್ಯಾದಿಗಳನ್ನು ನೇರವಾಗಿ ಪರಿಕ್ಷೀಸಲು ಸಾಧ್ಯವಾಗುವುದಿಲ್ಲ. ಆಯೋಗದೊಡನೆ ಸಮಾಲೋಚಿಸದೆ ಅಂಕ ಇಳಿತ ಮಾಡಿರುವುದು ಆಯೋಗದ ಸಂವಿಧಾನಿಕ ಕರ್ತವ್ಯಕ್ಕೆ (ಆರ್ಟಿಕಲ್ 320) ದಕ್ಕೆಯುಂಟಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವಾಗಿ ನ್ಯಾಯ ಒದಗಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಲು ಬಯಸುತ್ತೇನೆ".

### ಹೇಳಿಕೆ

ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿಯು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಮಾಡುವ ನೇಮಕಾತಿಯಾಗಿದ್ದು, ಅಭ್ಯರ್ಥಿಗಳನ್ನು ಹುದ್ದೆಗಳಿಗೆ ಆಯ್ಕೆ ಮಾಡುವಲ್ಲಿ ಮುಕ್ತ, ನಿಷ್ಪಕ್ಷಪಾತವಾದ ಮತ್ತು ಮೆರಿಟ್ ಆಧಾರಿತ ಆಯ್ಕೆಯನ್ನು ಮಾಡಲು ವ್ಯಕ್ತಿತ್ವ ಪರೀಕ್ಷೆಯ ಅಂಕವನ್ನು ಸೂಕ್ತ ಪ್ರಮಾಣದಲ್ಲಿ ಕಡಿಮೆ ಮಾಡುವುದು ಸಮರ್ಥನೀಯವಾಗಿದೆ. ವ್ಯಕ್ತಿತ್ವ ಪರೀಕ್ಷೆಗೆ ಹಾಜರಾಗುವ ಎಲ್ಲಾ ವರ್ಗಗಳ ಅಭ್ಯರ್ಥಿಗಳಿಗೆ ಇದು ಸಮಾನವಾಗಿ ಅನ್ವಯವಾಗುತ್ತದೆ. ಇದರಿಂದಾಗಿ, ಪ್ರತಿಭಾವಂತ ಹಾಗೂ ಅರ್ಹತೆಯುಳ್ಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಮಾನ ಅವಕಾಶ ದೊರೆಯುತ್ತದೆ. ಅಲ್ಲದೇ, ವ್ಯಕ್ತಿತ್ವ ಪರೀಕ್ಷೆ ಅಂಕಗಳನ್ನು 50 ಅಂಕಗಳಿಂದ 25 ಅಂಕಗಳಿಗೆ ಕಡಿಮೆ ಮಾಡುವುದರಿಂದ ಅರ್ಹ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಅಡಚಣೆಗಳು ಉಂಟಾಗುವುದಿಲ್ಲ. ಅಭ್ಯರ್ಥಿಗಳ ನಡುವೆ ಏಕರೀತಿಯ ಸ್ಪರ್ಧಾತ್ಮಕತೆ ಏರ್ಪಡುವುದರಿಂದ ಸ್ಪರ್ಧೆಯಲ್ಲಿ ಹಾಗೂ ಆಯ್ಕೆಯಲ್ಲಿಯೂ ನ್ಯಾಯಯುತ ಸಮತೋಲನ ತರುವ ಉದ್ದೇಶಕ್ಕಾಗಿ ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ಕ್ಕೆ ತಿದ್ದುಪಡಿ ಮಾಡಲು ಕರಡು ಅಧಿಸೂಚನೆಯನ್ನು ದಿನಾಂಕ: 21.02.2022ರಂದು ಹೊರಡಿಸಲಾಗಿದೆ. ಇದನ್ನು ದಿನಾಂಕ: 24.02.2022ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂಧವಾಗಿ ಸ್ವೀಕೃತವಾಗಿರುವ ಆಕ್ಷೇಪಣೆ/ಸಲಹೆಗಳನ್ನು ಪರಿಶೀಲಿಸಿ ಸರ್ಕಾರವು ಕ್ರಮವಹಿಸುತ್ತದೆ.

**ಕಡತ ಸಂಖ್ಯೆ: ಸಿಆಸುಇ 40 ಎಸ್ಎಸ್ಸಿ 2022**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ.